

# ಮೌಲ್ಯಮಾಪನ
## (ಹಿಂದೆ, ಮುಂದೆ, ಮಧ್ಯೆ)

**112**

ಸೂಚನೆ : ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಬಿಟ್ಟ ಜಾಗದಲ್ಲಿ ಹಿಂದೆ, ಮುಂದೆ, ಮಧ್ಯದ ಸಂಖ್ಯೆ ಬರೆ.

| | | |
|---|---|---|
| 6 | | 8 |
| | 8 | 9 |
| | 6 | |
| | | 5 |
| | 4 | |
| 3 | | 5 |
| 7 | | |
| | 2 | 3 |
| | 7 | 8 |
| 4 | 5 | |

6



# ಹಾಡು

## ಸಂಕಲನ (1-9)

113

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ, ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಒಂದು ಬಂದು ಎರಡು
ಒಳ್ಳೆಯ ಸುದ್ದಿಯ ಹರಡು
ಎರಡು ಒಂದು ಮೂರು
ಊಟಕೆ ಬೇಕು ಸಾರು
ಮೂರು ಒಂದು ನಾಲ್ಕು
ಬಾಗಿಲು ಮುಂದಕೆ ಹಾಕು
ನಾಲ್ಕು ಒಂದು ಐದು
ಮಾಡುವೆ ನಾನು ಜಾದು
ಐದು ಒಂದು ಆರು
ಮರಕೆ ಉಂಟು ಬೇರು
ಆರು ಒಂದು ಏಳು
ತಿಂದಿತು ಗುಬ್ಬಿ ಕಾಳು
ಏಳು ಒಂದು ಎಂಟು
ಎಂಟು ಒಂದು ಒಂಭತ್ತು
ಗಾಡಿಗೆ ಹೂಡು ಜೋಡೆತ್ತು
ಒಂಭತ್ತು ಒಂದು ಹತ್ತು
ಹೊಲದಲಿ ಬೀಜದ ಬಿತ್ತು.

6



# ಹೊರಾಂಗಣ

## ಸಂಕಲನ

114

**ಸೂಚನೆ :** ಶಿಕ್ಷಕರು ಕಾರ್ಡಿನಲ್ಲಿರುವ ಕಲಿಸುವ ಕ್ರಮದಂತೆ ಮಕ್ಕಳನ್ನು ಬಳಸಿಕೊಂಡು ಚಟುವಟಿಕೆ ಮಾಡುವುದು.

**ಉದ್ದೇಶ :** 1 ರಿಂದ 9 ರವರೆಗಿನ ಅಂಕಿಗಳ ಸಂಕಲನ ಕಲಿಸುವುದು.

**ಕಲಿಸುವ ಕ್ರಮ :**

1. ಒಂದು ವೃತ್ತದಲ್ಲಿ 4 ಮಕ್ಕಳನ್ನು ಮತ್ತೊಂದು ವೃತ್ತದಲ್ಲಿ 5 ಮಕ್ಕಳನ್ನು ನಿಲ್ಲಿಸುವುದು. ಎರಡೂ ವೃತ್ತದಲ್ಲಿನ ಮಕ್ಕಳನ್ನು ಸೇರಿಸಿ 9 ಮಕ್ಕಳಾದವು ಎಂದು ಹೇಳುವುದು.

2. ಒಂದು ವೃತ್ತದಲ್ಲಿ 3 ಮಕ್ಕಳನ್ನು ನಿಲ್ಲಿಸುವುದು. ಒಂದು ಚಪ್ಪಾಳೆಗೊಬ್ಬ ವಿದ್ಯಾರ್ಥಿಯು ವೃತ್ತಕ್ಕೆ ಬಂದು ಸೇರುವಂತೆ ಹೇಳಿ ಚಪ್ಪಾಳೆ ತಟ್ಟುತ್ತಾ ವೃತ್ತದಲ್ಲಿ ಎಷ್ಟು ಮಕ್ಕಳಿದ್ದಾರೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.

3. ಒಂದು ವೃತ್ತದಲ್ಲಿ 3 ಮಕ್ಕಳನ್ನು ನಿಲ್ಲಿಸಿ ಅದೇ ವೃತ್ತದಲ್ಲಿ 7 ಮಕ್ಕಳು ಬೇಕಾದರೆ ಆ ವೃತ್ತಕ್ಕೆ ಎಷ್ಟು ಮಕ್ಕಳನ್ನು ಸೇರಿಸಬೇಕು ಎಂದು ಹೇಳಿ ಮಕ್ಕಳಿಂದ ಚಟುವಟಿಕೆ ಮಾಡಿಸುವುದು.

**ಸೂಚನೆ :** ಇದೇ ರೀತಿ ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸುವುದು.

6



# ಸಂಕಲನ (1-9)

**115**

**ಉದ್ದೇಶ :** 1 ರಿಂದ 9ರವರೆಗಿನ ಅಂಕಿಗಳ ಸಂಕಲನ ಕಲಿಸುವುದು.

**ಸಾಮಗ್ರಿ :** ಕಾಳುಗಳು ಮತ್ತು ಕಡ್ಡಿಗಳು.

**ಕಲಿಸುವ ಕ್ರಮ :**

1. ಮೊದಲು 2 ಕಾಳುಗಳಿಗೆ ಒಂದು ಕಾಳನು ಸೇರಿಸಲು ಹೇಳಿ ಮಕ್ಕಳಿಂದ ಮಾಡಿಸುವುದು. ಇದೇ ರೀತಿ 3, 4 .............. 8 ರವರೆಗೆ ಕಾಳುಗಳಿಗೆ ಒಂದನ್ನು ಕೂಡುತ್ತಾ ಇದ್ದರೆ ವಿವಿಧ ಮೊತ್ತಗಳು ಬರುತ್ತವೆ ಎಂಬುದನ್ನು ತಿಳಿಯುವಂತೆ ಹೇಳಿಸುವುದು. ಯಾವ ಅಂಕಿಗಾದರೂ ಅಥವಾ ಸಂಖ್ಯೆಗಾದರೂ 1ನ್ನು ಸೇರಿಸಿದರೆ ಆ ಸಂಖ್ಯೆ ನಂತರದ ಸಂಖ್ಯೆಯೇ ಬರುತ್ತದೆ ಎಂದು ತಿಳಿಸುವುದು.

| | |
|---|---|
| 2 + 1 = 3 |  |
| 3 + 1 = 4 |  |
| 4 + 1 = 5 |  |
| 5 + 1 = 6 |  |
| 6 + 1 = 7 |  |
| 7 + 1 = 8 |  |
| 8 + 1 = 9 |  |

**ಉದಾ :** 8+1=9, 8 ರ ನಂತರದ ಸಂಖ್ಯೆ 9 ಎಂಬ ಅರಿವನ್ನು ಈ ರೀತಿಯ ಚಟುವಟಿಕೆಯಿಂದ ಮೂಡಿಸುವುದು.

**ಸಾಮಗ್ರಿ :** ಮಣಿಗಳು, ಕಲ್ಲುಗಳು, ರಬ್ಬರ್ ಅಂಕಿಗಳು, + ಮತ್ತು = ಚಿನ್ಹೆಗಳು.

**ಕಲಿಸುವ ಕ್ರಮ :**

1. ಒಂದು ಮಗುವಿಗೆ 4 ಮಣಿಗಳನ್ನು ಇನ್ನೊಂದು ಮಗುವಿಗೆ 5 ಮಣಿಗಳನ್ನು ಕೊಟ್ಟು ಇಬ್ಬರ ಬಳಿ ಇರುವ ಮಣಿಗಳನ್ನು ಒಟ್ಟು ಮಾಡಿ ಎಣಿಸಿ ಹೇಳುವುದು. ನಂತರ ಇದೇ ಸಮಸ್ಯೆಯನ್ನು ರಬ್ಬರ್ ಅಂಕಿ ಮತ್ತು ಚಿನ್ಹೆಗಳನ್ನು ಬಳಸಿ ಮಕ್ಕಳಿಂದ ಮಾಡಿಸುವುದು.

   4 + 5 = 9

2. ಒಂದು ಡಬ್ಬದಲ್ಲಿ 5 ಮಣಿಗಳನ್ನಿತ್ತು ಇಲ್ಲಿ ಎಂಟು ಮಣಿಗಳಾಗಬೇಕಾದರೆ 5 ಮಣಿಗಳಿಗೆ ಎಷ್ಟು ಮಣಿ ಸೇರಿಸಬೇಕು ಎಂದು ಕೇಳಿ ನಂತರ ಮಕ್ಕಳಿಂದ ಹೇಳಿಸುವುದು.

**ಸೂಚನೆ :** ಇದೇ ರೀತಿ ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸುವುದು.

6



# ಆಟ
# (ಸಂಕಲನ)

**120**

**ಸೂಚನೆ :** ಸೀತಾಫಲದ ಹಣ್ಣಿನ ಚಿತ್ರದ ಮೇಲೆ ಇರುವ ಉತ್ತರಗಳಿಗೆ ಮಿಂಚುಪಟ್ಟಿಯಲ್ಲಿನ ಸರಿಹೊಂದುವ ಸಮಸ್ಯೆಗಳನ್ನು ಬಿಡಿಸುವ ಚಟುವಟಿಕೆ ಮಾಡಿಸುವುದು.




## ಆಟ ಆಡಿಸುವ ಕ್ರಮ

1. **2x**3 ಸೆಂ.ಮೀ. ಅಳತೆಯುಳ್ಳ ಮಿಂಚು ಪಟ್ಟಿಗಳಲ್ಲಿ ಮೊತ್ತ 9ಕ್ಕೆ ಮೀರದಂತೆ, ಸಮಸ್ಯೆಗಳನ್ನೂ ಬರೆದಿಟ್ಟು ಕೊಳ್ಳುವುದು.
   ಉದಾ : [3+5] [5+4] [7+1] [6+2]
2. ಈ ಹಂತಕ್ಕೆ ಬಂದ ಮಕ್ಕಳಿಗೆ ಆಟದ ಬೋರ್ಡು ಜೊತೆಗೆ ಮಿಂಚುಪಟ್ಟಿಗಳನ್ನು ನೀಡುವುದು.
3. ನೀಡಿರುವ ಮಿಂಚುಪಟ್ಟಿಗಳಲ್ಲಿನ ಸಮಸ್ಯೆಗಳಿಗೆ ಸರಿ ಉತ್ತರವನ್ನು ಆಟದ ಬೋರ್ಡ್‌ನಲ್ಲಿ ಗುರ್ತಿಸಿ, ಆ ಸಂಖ್ಯೆಯ ಮೇಲೆ ಮಿಂಚುಪಟ್ಟಿ ಇಡಲು ಸೂಚಿಸಿ ಚಟುವಟಿಕೆಯಲ್ಲಿ ತೊಡಗಿಸುವುದು.
4. ವಿದ್ಯಾರ್ಥಿಯು ಚಟುವಟಿಕೆಯನ್ನು ಪೂರ್ಣಗೊಳಿಸಿದ ನಂತರ ಸಮಸ್ಯೆ ಮತ್ತು ಉತ್ತರಕ್ಕೆ ತಾಳೆ ಬರುವುದನ್ನು ಶಿಕ್ಷಕರು ಖಾತ್ರಿಪಡಿಸಿಕೊಳ್ಳುವುದು.
5. ಉತ್ತರ ಸರಿ ಇದ್ದರೆ ಮೆಚ್ಚುಗೆ ಸೂಚಿಸುವುದು ತಪ್ಪಾಗಿದ್ದಲ್ಲಿ ಕಾರಣ ತಿಳಿದು ಸುಧಾರಣೆಗಾಗಿ ಪರಿಹಾರ ಕ್ರಮ ಕೈಗೊಳ್ಳುವುದು.

6



# ಮೌಲ್ಯಮಾಪನ

## ಸಂಕಲನ (ದಶಕ ರಹಿತ 1 - 9)

**121**

**ಸೂಚನೆ :** ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಮೊತ್ತ ಕಂಡುಹಿಡಿಯಿರಿ.

| | | |
|---|---|---|
| 8<br>+ 1<br>____<br>____ | 5<br>+ 3<br>____<br>____ | 2 + 3 = ☐<br>4 + 4 = ☐ |
| 4<br>+ 4<br>____<br>____ | 7<br>+ 2<br>____<br>____ | 6 + 3 = ☐<br>3 + 5 = ☐ |
| 3<br>+ 3<br>____<br>____ | 2<br>+ 6<br>____<br>____ | 4 + 5 = ☐<br>5 + 4 = ☐ |
| 4<br>+ 5<br>____<br>____ | 4<br>+ 3<br>____<br>____ | 2 + 2 = ☐<br>7 + 2 = ☐ |
| 6<br>+ 3<br>____<br>____ | 2<br>+ 5<br>____<br>____ | 6 + 2 = ☐<br>2 + 7 = ☐ |



# ಹಾಡು



**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ. ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ, ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಶಿಕ್ಷಕರು : ನಮ್ಮದವ್ವ ಹತ್ತು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತು. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದತ್ತ. ಎಷ್ಟು ?

ಮಕ್ಕಳು : ಒಂಭತ್ತು

ಶಿಕ್ಷಕರು : ನಮ್ಮದವ್ವ ಒಂಭತ್ತು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಎಂಟು

ಶಿಕ್ಷಕರು : ನಮ್ಮದವ್ವ ಎಂಟು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಏಳು

ಶಿಕ್ಷಕರು : ನಮ್ಮದವ್ವ ಏಳು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಆರು

ಶಿಕ್ಷಕರು : ನಮ್ಮದವ್ವ ಆರು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಐದು

ಶಿಕ್ಷಕರು : ನಮ್ಮದವ್ವ ಐದು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ನಾಲ್ಕು

ಶಿಕ್ಷಕರು : ನಮ್ಮದವ್ವ ನಾಲ್ಕು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಮೂರು

ಶಿಕ್ಷಕರು : ನಮ್ಮದವ್ವ ಎರಡು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಅದರಲಿ ಒಂದು ಹಾರಿ ಹೋಗಿ ಎಷ್ಟು ಉಳಿದಿತ್ತ. ಎಷ್ಟು ?

ಮಕ್ಕಳು : ಒಂದು

ಶಿಕ್ಕಕರು : ನಮ್ಮದವ್ವ ಒಂದು ಹಕ್ಕಿ ಚಿಂವ್ ಚಿಂವ್ ಗುಡುತ್ತಿತ್ತ. ಆ ಹಕ್ಕಿ ಮರದ ಮೇಲೆ ಗೂಡು ಕಟ್ಟಿತ್ತ.

7



# ಹೊರಾಂಗಣ
## ವ್ಯವಕಲನ (1-9)

123

**ಸೂಚನೆ :** ಕಾರ್ಡಿನಲ್ಲಿರುವ ಕಲಿಸುವ ಕ್ರಮದಂತೆ ಮಕ್ಕಳನ್ನು ಬಳಸಿಕೊಂಡು ಈ ಚಟುವಟಿಕೆ ಮಾಡಿಸುವುದು.

**ಉದ್ದೇಶ :** 1 ರಿಂದ 9 ರವರೆಗಿನ ವ್ಯವಕಲನ.

**ಕಲಿಸುವ ಕ್ರಮ :**

1. ಒಂದು △ ವನ್ನು ಬರೆದು ಅದರಲ್ಲಿ 7 ಮಕ್ಕಳನ್ನು ನಿಲ್ಲಿಸುವುದು ಆ △ ರಿಂದ 4 ಮಕ್ಕಳನ್ನು ಹೊರಗೆ ಕಳುಹಿಸಿ ಆ △ ದಲ್ಲಿ ಉಳಿದ ಮಕ್ಕಳೆಷ್ಟು ಎಂದು ಕೇಳಿ ಉತ್ತರ ಪಡೆಯುವುದು.

2. ಒಂದು ವರ್ಗವನ್ನು ಬರೆದು ಅದರಲ್ಲಿ 7 ಮಕ್ಕಳನ್ನು ನಿಲ್ಲಿಸುವುದು. ಆ ವರ್ಗದಲ್ಲಿ 3 ಮಕ್ಕಳು ಉಳಿಯಬೇಕಾದರೆ ಎಷ್ಟು ಮಕ್ಕಳನ್ನು ಹೊರಗೆ ಕಳುಹಿಸಬೇಕು ಎಂಬುದನ್ನು ಮಕ್ಕಳಿಂದ ಹೇಳಿಸುವುದು.

**ಸೂಚನೆ :** ಈ ರೀತಿ ಬೇರೆ ಬೇರೆ ಚಟುವಟಿಕೆ ಮಾಡಿಸುವುದು.

7



# ವ್ಯವಕಲನ
## (1-9)

124

**ಉದ್ದೇಶ :** 1 ರಿಂದ 9 ರವರೆಗಿನ ಅಂಕಿಗಳನ್ನು ಬಳಸಿ ವ್ಯವಕಲನ ಮಾಡಿಸುವುದು.

**ಸಾಮಗ್ರಿ :** ಹುಣಸೆ ಬೀಜಗಳು, ರಬ್ಬರ್ ಅಂಕಿಗಳು '–' ಮತ್ತು '=' ಚಿಹ್ನೆಗಳು.

**ಕಲಿಸುವ ಕ್ರಮ :**

1. ಒಂದು ಮಗುವಿಗೆ 9 ಹುಣಸೆ ಬೀಜಗಳನ್ನು ಕೊಟ್ಟು ಆ ಮಗುವಿನಿಂದ 4 ಹುಣಸೇ ಬೀಜಗಳನ್ನು ಬೇರೆ ಮಗುವಿಗೆ ಕೂಡಿಸುವುದು. ಉಳಿದ ಹುಣಸೆ ಬೀಜಗಳೆಷ್ಟು ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.
2. 9 ಹುಣಸೆ ಬೀಜಗಳನ್ನು ಒಂದು ವೃತ್ತದಲ್ಲಿ ಇಡುವುದು. ಆ ವೃತ್ತದಲ್ಲಿರುವ ಹುಣಸೆ ಬೀಜಗಳಲ್ಲಿ 4 ಹುಣಸೆ ಬೀಜಗಳನ್ನು ಹೊರ ತೆಗೆದು ವೃತ್ತದಲ್ಲಿ ಉಳಿದ ಹುಣಸೆ ಬೀಜಗಳೆಷ್ಟು ಎಂದು ಕೇಳಿ ಉತ್ತರ ಪಡೆಯುವುದು.
3. ಒಂದು ವೃತ್ತದಲ್ಲಿ 9 ಕಲ್ಲುಗಳನ್ನಿಟ್ಟು ಈ ವೃತ್ತದಲ್ಲಿ 1 ಉಳಿಯ ಬೇಕಾದರೆ ಎಷ್ಟು ಕಲ್ಲುಗಳನ್ನು ಹೊರ ತೆಗೆಯಬೇಕು ಎಂದು ಕೇಳಿ ಚಟುವಟಿಕೆ ಮಾಡಿಸುವುದು.
4. 9 – 8 = ☐ ಈ ಸಮಸ್ಯೆ ನೀಡಿ ಉತ್ತರ ಪಡೆಯಲು ಚಟುವಟಿಕೆ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಈ ರೀತಿಯ ಹಲವು ಚಟುವಟಿಕೆಗಳನ್ನು ಮಾಡಿಸುತ್ತಾ ವ್ಯವಕಲನದ ಪರಿಕಲ್ಪನೆ ಮೂಡಿಸುವುದು. ನಂತರ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

7



# ಆಟ
# ವ್ಯವಕಲನ (1-9)

**128**

**ಸೂಚನೆ :** ಸೀತಫಲದ ಹಣ್ಣಿನ ಚಿತ್ರದ ಮೇಲೆ ಇರುವ ಉತ್ತರಗಳಿಗೆ ಮಿಂಚುಪಟ್ಟಿಯಲ್ಲಿನ ಸರಿಹೊಂದುವ ಸಮಸ್ಯೆಗಳನ್ನು ಬಿಡಿಸುವ ಚಟುವಟಿಕೆ ಮಾಡಿಸುವುದು.




## ಆಟ ಆಡಿಸುವ ಕ್ರಮ

1. **2**x3 ಸೆಂ.ಮೀ. ಅಳತೆಯುಳ್ಳ ಮಿಂಚು ಪಟ್ಟಿಗಳಲ್ಲಿ ವ್ಯತ್ಯಾಸ 9ಕ್ಕೆ ಮೀರದಂತೆ, ಸಮಸ್ಯೆಗಳನ್ನು ಬರೆದಿಟ್ಟು ಕೊಳ್ಳುವುದು.
   ಉದಾ : 9–4 8–5 7–3 6–5
2. ಈ ಹಂತಕ್ಕೆ ಬಂದ ಮಕ್ಕಳಿಗೆ ಆಟದ ಬೋರ್ಡ್ ಜೊತೆಗೆ ಮಿಂಚುಪಟ್ಟಿಗಳನ್ನು ನೀಡುವುದು.
3. ನೀಡಿರುವ ಮಿಂಚುಪಟ್ಟಿಗಳಲ್ಲಿನ ಸಮಸ್ಯೆಗಳಿಗೆ ಸರಿ ಉತ್ತರವನ್ನು ಆಟದ ಬೋರ್ಡ್‌ನಲ್ಲಿ ಗುರ್ತಿಸಿ, ಆ ಸಂಖ್ಯೆಯ ಮೇಲೆ ಮಿಂಚುಪಟ್ಟಿ ಇಡಲು ಸೂಚಿಸಿ ಚಟುವಟಿಕೆಯಲ್ಲಿ ತೊಡಗಿಸುವುದು.
4. ವಿದ್ಯಾರ್ಥಿಯು ಚಟುವಟಿಕೆಯನ್ನು ಪೂರ್ಣಗೊಳಿಸಿದ ನಂತರ ಸಮಸ್ಯೆ ಮತ್ತು ಉತ್ತರಕ್ಕೆ ತಾಳೆ ಬರುವುದನ್ನು ಶಿಕ್ಷಕರು ಖಾತ್ರಿಪಡಿಸಿಕೊಳ್ಳುವುದು.
5. ಉತ್ತರ ಸರಿ ಇದ್ದರೆ ಮೆಚ್ಚುಗೆ ಸೂಚಿಸುವುದು. ತಪ್ಪಾಗಿದ್ದಲ್ಲಿ ಕಾರಣ ತಿಳಿದು ಸುಧಾರಣೆಗಾಗಿ ಪರಿಹಾರ ಕ್ರಮ ಕೈಗೊಳ್ಳುವುದು.

7 

# ಮೌಲ್ಯಮಾಪನ
## ವ್ಯವಕಲನ (ದಶಕ ರಹಿತ 1 - 9)

**129**

**ಸೂಚನೆ :** ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಮೊತ್ತ ಕಂಡುಹಿಡಿಯಿರಿ.

| | | |
|---|---|---|
| 6 - 5 = ___ | 7 - 3 = ___ | 9 - 5 = ☐ |
| | | 7 - 3 = ☐ |
| 8 - 2 = ___ | 5 - 2 = ___ | 5 - 2 = ☐ |
| | | 4 - 2 = ☐ |
| 6 - 3 = ___ | 9 - 2 = ___ | 8 - 5 = ☐ |
| | | 6 - 4 = ☐ |
| 8 - 3 = ___ | 9 - 5 = ___ | 5 - 1 = ☐ |
| | | 5 - 3 = ☐ |
| ☐ - 6 = 3 | 4 - ☐ = 2 | ☐ - 2 = 6 |
| | | 9 - ☐ = 5 |